ಮೇಃ ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳವರ ನ್ಯಾಯಾಲಯ ಖಾನಾಪೂರ

ಸಿ.ಸಿ.ನಂಃ 822/2014

ಸಿ.ಡಬ್ಲೂ 1

ಪಿ.ಡಬ್ಲೂ 1

| | | |
|---|---|---|
| ಸಾಕ್ಷಿಯ ಹೆಸರು | : | ಡುಮಿಂಗ್ ಶಾಲು ಸೋಜ |
| ವಯಸ್ಸು | : | 59 ವರ್ಷ |
| ಉದ್ಯೋಗ | : | ಕೂಲಿ ಕೆಲಸ |
| ವಾಸ್ತವ್ಯ | : | ಮನಸಾಪೂರ, ಖಾನಾಪೂರ |

ದಿನಾಂಕ 25-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣಿಕರಸಲಾಯಿತು.

ಮುಖ್ಯ ವಿಚಾರಣೆಃ ಸರ್ಕಾರಿ ಅಭಿಯೋಜಕರಿಂದಃ

ಚಾಸಾ 2 ರವರ ಪರಿಚಯವಿದೆ. ಸಾಕ್ಷಿದಾರರಿಗೆ ಅಪರಾಧ ಸ್ಥಳದ ಮಹಜರನ್ನು ತೋರಿಸಲಾಗಿ ಅದರಲ್ಲಿರುವ ತನ್ನ ಸಹಿಯನ್ನು ಗುರುತಿಸಿದ್ದು ಮಹಜರನ್ನು ನಿಪಿ-1 ಎಂದು ಸಾಕ್ಷಿದಾರರ ಸಹಿಯನ್ನು ನಿಪಿ-1(ಎ) ಎಂದು ಗರುತಿಸಲಾಯಿತು. ಸದರಿ ಸಹಿಯನ್ನು ಈಗ್ಗೆ 9-10 ವರ್ಷಗಳ ಹಿಂದೆ ಅಬಕಾರಿ ಪೊಲೀಸ ಠಾಣೆಯಲ್ಲಿ ಮಾಡಿರುತ್ತೇನೆ. ಯಾವ ಕಾರಣಕ್ಕಾಗಿ ಮಾಡಿರುತ್ತೇನೆ ಎಂದು ಗೊತ್ತಿಲ್ಲ, ಪೊಲಿಸರು ಹೇಳಿದ ಕಾರಣಕ್ಕೆ ಮಾಡಿರುತ್ತೇನೆ. ನಿಪಿ-1 ರಲ್ಲಿ ಏನು ಬರೆದಿದೆ ಎಂದು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಪಂಚನಾಮೆಯನ್ನು ಮಾಡಿರುವುದಿಲ್ಲ ಹಾಗೂ ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ.

**(ಈ ಹಂತದಲ್ಲಿ ಮಾನ್ಯ ಸ.ಸ.ಅ ರವರು ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯೆಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಬೇಕೆಂದು ಕೋರಿದ್ದು , ಮನವಿಯನ್ನು ಪುರಸ್ಕರಿಸಿ ಅನುಮತಿ ನೀಡಲಾಯಿತು)**

**ಪಾಟೀ ಸವಾಲುಃ- ಸರ್ಕಾರಿ ಅಭೀಯೋಜರರಿಂದ-**

ದಿಃ 02-09-2013 ರಂದು ಚಾಸಾ 3 ರವರು ನನಗೆ ಕಾಟಗಾಳಿ ಗ್ರಾಮಕ್ಕೆ ದಾಳಿಗೆ

ಹೋಗಬೇಕು ಎಂದು ತಿಳಿಸಿದ ಮೇರೆಗೆ ನಾನು ಮತ್ತು ಚಾಸಾ-3 ಹಾಗೂ ಇತರ ಸಿಬ್ಬಂದಿಯೊಂದಿಗೆ ಅವರ ಜೋತೆ ಹೋಗಿರುತ್ತೇವೆ ಎಂದರೆ ಸರಿಯಲ್ಲ. ಆಗ ಕಾಟಗಾಳಿ ಗ್ರಾಮದಲ್ಲಿ ರಸ್ತೆ ಗಾವಲು ಮಾಡುತ್ತಿರುವ ಸಮಯದಲ್ಲಿ ಒಂದು ದ್ವಿಚಕ್ರ ವಾಹನ ಕಾಟಗಾಳಿ ಗ್ರಾಮ ಕಡೆಯಿಂದ ಬರುವ ಶಬ್ದ ಕೇಳಿ ಬಂತು ಎಂದರೆ ಸರಿಯಲ, ನಂತರ ಚಾಸಾ 3 ಹಾಗೂ ಸಿಬ್ಬಂದಿಗಳು ಸದರಿ ಗಾಡಿಯನ್ನು ಕೈ ಸನ್ನೆ ಮಾಡಿದಾಗ ಸದರಿ ವಾಹನದ ಚಾಲಕ ವಾಹವನ್ನು ಅಲ್ಲಿಯೇ ಬಿಟ್ಟು ಓಡಿ ಹೋದನು. ನಂತರ ಸ್ಥಳದಲ್ಲೇ ಶೋಧನಾ ಸಮುಚಿತ ತಯಾರಿಸಿಕೊಂಡು ವಾಹನ ನಂ.ಕೆಎ-22/ಎನ್-7003ನ್ನು ಪರಿಶೀಲಿಸಿದಾಗ 4 ಟ್ರಕ್ಕಿನ ಟ್ಯೂಬಗಳು ಸಿಕ್ಕವು ಎಂದರೆ ಸರಿಯಲ್ಲ, ಸದರಿ ಪ್ರತಿಯೊಂದು ಟ್ಯೂಬನಲ್ಲಿ 20 ಲೀಟರನಂತೆ ಕಳ್ಳಭಟ್ಟಿ ಸರಾಯಿ ಇರುವುದು ಕಂಡು ಬಂದಿತು ಎಂದರೆ ಸರಿಯಲ್ಲ, ಸದರಿ ಪ್ರತಿ ಟ್ಯೂಬನಲ್ಲಿ 180 ಮಿಲಿ ಕಳ್ಳಬಟ್ಟಿಯನ್ನು ಸ್ಯಾಂಪಲಗಾಗಿ ಪ್ರತ್ಯೇಕವಾಗಿ ತೆಗೆಯಲಾಯಿತು ಎಂದರೆ ಸರಿಯಲ್ಲ, ನಂತರ ದ್ವಿಚಕ್ರ ವಾಹನ ಹಾಗೂ ಸದರಿ ಮುದ್ದೆಮಾಲುಗಳನ್ನು ಹಾಗೂ ರಾಸಾಯನಿಕ ಪರೀಕ್ಷೆಗೆ ತೆಗೆದುಕೊಂಡರೆಂದರೆ ಸರಿಯಲ್ಲ, ಸ್ಥಳದಲ್ಲಿ ಮುಂಜಾನೆ 03.45 ರಿಂದ 05.00 ಗಂಟೆವರೆಗೆ ನಿಪಿ-1 ರಂತೆ ಪಂಚನಾಮೆ ಜರುಗಿಸಿ, ಸರ್ಕಾರ ಪರವಾಗಿ ದೂರು ದಾಖಲಿಸಿದರು ಎಂದರೆ ಸರಿಯಲ್ಲ, ಸದರಿ ದಾಳಿಯಲ್ಲಿ ನಾನು ಭಾಗವಹಿಸದ್ದರೂ ಸಹ ಆರೋಪಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿತರ ಪರ ವಕೀಲರಿಂದಃ

ಏನೂ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೆ. ಸರಿ ಇದೆ.

ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು

ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳು, ಖಾನಾಪೂರ.